RNU AIR DHARWAD

# JANUARY 11, 2025

## AKASHAVANI - DHARWAD

## PRADESH SAMACHARA (KANNADA) 07.05 A.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು**

<><><>

- **ಉಪ ರಾಷ್ಟ್ರಪತಿ ಜಗದೀಪ ಧನಕರ** ಇಂದು ಬೆಂಗಳೂರಿಗೆ ಆಗಮನ; ಹಲವು ಕಾರ್ಯಕ್ರಮಗಳಲ್ಲಿ ಭಾಗಿ.

- **ಪ್ರಧಾನಮಂತ್ರಿ ಸುರಕ್ಷಿತ ಮಾತೃತ್ವ** ಅಭಿಯಾನ; ಬಳ್ಳಾರಿಯ ಆರೋಗ್ಯ ಕೇಂದ್ರಗಳಲ್ಲಿ, ಗರ್ಭಿಣಿಯರಿಗೆ ಪೌಷ್ಟಿಕ ಭೋಜನ ವ್ಯವಸ್ಥೆ.

- **ಚಿಕ್ಕಮಗಳೂರಿನಲ್ಲಿ, ಕಾಳು ಮೆಣಸು ಸೇರಿ,** ಎಂಟು ಬೆಳೆಗಳ ಸಂಸ್ಕರಣಾ ಘಟಕ ಸ್ಥಾಪನೆಗೆ, ಕೇಂದ್ರಕ್ಕೆ ಪ್ರಸ್ತಾವ.

- **ಧಾರವಾಡ ಜಿಲ್ಲೆ, ತೇಗೂರು ಗ್ರಾಮದ** ‘ಕೃ ್ಣ ವ್ಯಾಲಿ’ ಎಮ್ಮೆ ತಳಿ ಸಂವರ್ಧನಾ ಕೇಂದ್ರ, ರಾಜ್ಯಕ್ಕೆ ಮಾದರಿ.

<><><>

**ಉಪ ರಾಷ್ಟ್ರಪತಿ ಜಗದೀಪ ಧನಕರ** ಇಂದು ಬೆಂಗಳೂರಿಗೆ ಆಗಮಿಸಲಿದ್ದಾರೆ. ವಿವಿಧ ರಾಜ್ಯಗಳ ಲೋಕಸೇವಾ ಆಯೋಗದ ಅಧ್ಯಕ್ಷರುಗಳ, 25ನೇ ರಾಷ್ಟ್ರೀಯ ಸಮಾವೇಶವನ್ನು ಅವರು ಉದ್ಘಾಟಿಸಲಿದ್ದಾರೆ. ಬಳಿಕ ಬಿ.ಇ.ಎಲ್. ನಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ. ನಂತರ, ಬಿ.ಎಚ್.ಇ.ಎಲ್. ಗೂ ಅವರು ಭೇಟಿ ನೀಡಲಿದ್ದು, ವಿಜ್ಞಾನಿಗಳು ಹಾಗೂ ಸಿಬ್ಬಂದಿಯೊಂದಿಗೆ ಸಂವಾದ ನಡೆಸಲಿದ್ದಾರೆ. ಉಪ ರಾಷ್ಟ್ರಪತಿಯವರು ಸಂಜೆ ಹೊಸ ದಿಲ್ಲಿಗೆ ಹಿಂದಿರುಗಲಿದ್ದಾರೆ.

<><><>

**ಪ್ರಧಾನಮಂತ್ರಿ ಸುರಕ್ಷಿತ ಮಾತೃತ್ವ** ಅಭಿಯಾನದಡಿ, ಬಳ್ಳಾರಿ ಜಿಲ್ಲೆಯ ಎಲ್ಲ ಆರೋಗ್ಯ ಕೇಂದ್ರಗಳಲ್ಲಿ, ಗರ್ಭಿಣಿಯರ ತಪಾಸಣೆ ಹಾಗೂ ಪೌಷ್ಟಿಕಾಂಶಯುಕ್ತ ಆಹಾರ ಒದಗಿಸುವ, ವಿನೂತನ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗಿದೆ. ಜಿಲ್ಲಾ ಆರೋಗ್ಯಾಧಿಕಾರಿ ಡಾಕ್ಟರ್ ಯಲ್ಲಾ ರಮೇಶ ಬಾಬು ಮಾಹಿತಿ ನೀಡಿ, ಪ್ರತಿ ತಿಂಗಳು 9 ಮತ್ತು 24ನೇ ದಿನಾಂಕದಂದು, ಗರ್ಭಿಣಿಯರ ಆರೋಗ್ಯ ತಪಾಸಣೆ ಕಾರ್ಯ ನಿರಂತರವಾಗಿ ನಡೆಯುತ್ತಿದೆ. ಇದೇ ಮೊದಲ ಬಾರಿಗೆ, ಗ್ರಾಮೀಣ ಮತ್ತು ನಗರ ಭಾಗದ ಸಮುದಾಯ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ತಪಾಸಣೆಗೆ ಆಗಮಿಸಿದ ಗರ್ಭಿಣಿಯರಿಗೆ, ಪ್ರಾಯೋಗಿಕವಾಗಿ ಪೌಷ್ಟಿಕಾಂಶಯುಕ್ತ ಊಟದ ವ್ಯವಸ್ಥೆ ಮಾಡಲಾಗಿದೆ, ಎಂದರು.

<><><>

**ಪ್ರಾದೇಶಿಕ ಅಸಮತೋಲನ ನಿವಾರಣೆಗಾಗಿ,** ಡಿ.ಎಂ. ನಂಜುಂಡಪ್ಪ ಅವರ ವರದಿ ಆಧರಿಸಿ, ಹೊಸ ಕೈಗಾರಿಕಾ ನೀತಿ ಮೂಲಕ, ರಾಜ್ಯದ ಹಿಂದುಳಿದ ಜಿಲ್ಲೆಗಳಿಗೆ, ಹೊಸ ಕೈಗಾರಿಕೆ ಆರಂಭಿಸಲು ಯೋಜಿಸಲಾಗಿದೆ ಎಂದು, ಕೈಗಾರಿಕಾ ಖಾತೆ ಸಚಿವ ಎಮ್ ಬಿ. ಪಾಟೀಲ ತಿಳಿಸಿದ್ದಾರೆ. ವಿಜಯನಗರ ಜಿಲ್ಲೆ, ಹೊಸಪೇಟೆಯಲ್ಲಿ ಸುದ್ದಿಗೋಷ್ಠಿ ನಡೆಸಿದ ಸಚಿವರು, ವಿಶೇಷವಾಗಿ ಮಹಿಳೆಯರು ಹಾಗೂ ಯುವಜನರಿಗೆ ಉದ್ಯೋಗಾವಕಾಶ ಒದಗಿಸಲು, ನೀಲನಕ್ಷೆ ಸಿದ್ಧ ಪಡಿಸಲಾಗುತ್ತಿದೆ ಎಂದರು.

<><><>

**ಕೇವಲ ಕೈ ಉತ್ಪನ್ನಗಳನ್ನು ಉತ್ಪಾದಿಸುವುದು** ಹಾಗೂ ಕೈ ಉತ್ಪನ್ನಗಳಿಂದಲೇ ಬದುಕಲು ಪ್ರಯತ್ನಿಸುವುದೇ ಚಳವಳಿ. ಇದು ಕೇವಲ ಆರ್ಥಿಕ ಚಳಿವಳಿ ಅಲ್ಲ; ಆಧ್ಯಾತ್ಮಿಕ ಚಳವಳಿಯೂ ಹೌದು ಎಂದು, ಚರಕ ಸಂಸ್ಥಾಪಕ, ಹಿರಿಯ ರಂಗಕರ್ಮಿ ಪ್ರಸನ್ನ ಪ್ರತಿಪಾದಿಸಿದ್ದಾರೆ.

ಬೆಂಗಳೂರಿನ ಚಿತ್ರಕಲಾ ಪರಿ ’ತ್ತಿನಲ್ಲಿ ಕವಿ ಕಾವ್ಯ ಟ್ರಸ್ಟ್ ಹಾಗೂ ದೇಸಿ ಟ್ರಸ್ಟ್ ಸಂಯುಕ್ತವಾಗಿ ಆಯೋಜಿಸಿರುವ, ಮೂರು ದಿನಗಳ ಕೊಡು, ಕೊಳ್ಳುವವರ ಚಿಂತನ ಸಮಾವೇಶ ಹಾಗೂ ಕೈಮಗ್ಗ ಖಾದಿ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

<><><>

**ಕರ್ನಾಟಕ ಕ್ರಾಫ್ಟ್ ಕೌನ್ಸಿಲ್ ಕಾರ್ಯಕಾರಿ** ಸಮಿತಿ ಸದಸ್ಯೆ ಚಂದ್ರಾ ಜೈನ್ ಉದ್ಘಾಟಿಸಿದ, ಪ್ರದರ್ಶಿನಿಯಲ್ಲಿ ಪಾಲ್ಗೊಂಡಿರುವ, ಗದಗ ಜಿಲ್ಲೆ, ರೋಣ ತಾಲೂಕು ಗಜೇಂದ್ರಗಡದ, ವಿ.ಡಿ.ಕೆ. ಕೈ ಮಗ್ಗದ ನೂಲಿನ ಬಟ್ಟೆ ಉತ್ಪಾದನೆ ಘಟಕದ ಪ್ರತಿನಿಧಿ, ಪ್ರೀತಿ ಅಂಗಡಿ ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

**ಪ್ರೀತಿ ಅಂಗಡಿ ಧ್ವನಿ 40 ಸೆಕೆಂಡುಗಳು**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ @airnews_dharwad ಹಾಗೂ**

**ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.**

<><><>

**ರಾಜ್ಯದ ಕಾಳು ಮೆಣಸು,** ತೆಂಗು, ಕಾಫಿ ಮತ್ತು ಅಡಕೆ ಸಂಸ್ಕರಣೆಗಾಗಿ, ಚಿಕ್ಕಮಗಳೂರಿನಲ್ಲಿ, 8 ಬೆಳೆಗಳ ಸಂಸ್ಕರಣಾ ಘಟಕ ಸ್ಥಾಪಿಸಲು ಯೋಜಿಸಲಾಗಿದೆ ಎಂದು, ಉಡುಪಿ ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದ ಸಂಸದ ಕೋಟಾ ಶ್ರೀನಿವಾಸ ಪೂಜಾರಿ ತಿಳಿಸಿದ್ದಾರೆ. ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ, ಸಾಂಪ್ರದಾಯಿಕ ಕೈಗಾರಿಕೆಗಳ ಪುನರುತ್ಪಾದನೆಗಾಗಿ ನಿಧಿ ಯೋಜನೆ, ಸಭೆಯಲ್ಲಿ ಅವರು ಮಾತನಾಡಿದರು. ಕೇಂದ್ರ ಸರ್ಕಾರದಿಂದ ಶೇಕಡ 90 ರಷ್ಟು ಅನುದಾನ ಪಡೆದು, ಬಾಕಿ ಶೇಕಡ 10 ರಷ್ಟು ಅನುದಾನವನ್ನು, ಫಲಾನುಭವಿಗಳು ಭರಿಸಿ, ಒಟ್ಟು 5 ಕೋಟಿ ರೂಪಾಯಿ ವೆಚ್ಚದಲ್ಲಿ, ಸಂಸ್ಕರಣಾ ಘಟಕ ಸ್ಥಾಪಿಸಲು, ಕೇಂದ್ರಕ್ಕೆ ಪ್ರಸ್ತಾವ ಸಲ್ಲಿಸುವುದಾಗಿ, ಅವರು ಹೇಳಿದರು.

<><><>

**ಧಾರವಾಡ ಜಿಲ್ಲೆ, ತೇಗೂರು ಗ್ರಾಮದ** ಎಮ್ಮೆ ತಳಿ ಸಂವರ್ಧನಾ ಕೇಂದ್ರದಲ್ಲಿ, 'ಕೃ ್ಣ ವ್ಯಾಲಿ' ಎಂಬ ಸ್ಥಳೀಯ ತಳಿಯನ್ನು ಸಂರಕ್ಷಣೆ ಮಾಡಲಾಗುತ್ತಿದ್ದು, ಇಡೀ ರಾಜ್ಯಕ್ಕೆ ಇದು ಒಂದೇ ಮಾದರಿ ಕೇಂದ್ರ ಎಂದು, ಜಿಲ್ಲಾಧಿಕಾರಿ ದಿವ್ಯಾ ಪ್ರಭು ತಿಳಿಸಿದ್ದಾರೆ. ತೇಗೂರಿನ ಎಮ್ಮೆ ತಳಿ ಸಂವರ್ಧನಾ ಕೇಂದ್ರಕ್ಕೆ ಭೇಟಿ ನೀಡಿ, ಮಾತನಾಡಿದ ಅವರು, ಅಳಿವಿನಂಚಿನಲ್ಲಿರುವ ದೇಸಿ ತಳಿ ಆಕಳು, ಕೃ ್ಣ ಕಣಿವೆ ಜಾನುವಾರುಗಳನ್ನು, ಮುನಿರಬಾದ್‌ನಿಂದ, ತೇಗೂರು ಜಾನುವಾರು ಸಂವರ್ಧನಾ ಕೇಂದ್ರಕ್ಕೆ ವರ್ಗಾಯಿಸಿ, ತಳಿ ಸಂರಕ್ಷಣಾ ಯೋಜನೆಯನ್ನು ಮುಂದುವರಿಸಲಾಗುತ್ತಿದೆ ಎಂದು, ಹೇಳಿದರು.

<><><>

**ಮಡಿಕೇರಿಯ ಜನರಲ್ ತಿಮ್ಮಯ್ಯ** ಸ್ಮಾರಕ ಭವನಕ್ಕೆ, ವಾಯು ಪಡೆಯ ಬೆಂಗಳೂರಿನ ತರಬೇತಿ ವಿಭಾಗದ ಮುಖ್ಯಸ್ಥ, ಏರ್ ಮಾ ್ಶಲ್ ನಾಗೇಶ ಕಪೂರ್ ಭೇಟಿ ನೀಡಿ, ಗೌರವ ನಮನ ಸಲ್ಲಿಸಿದರು. ವೀರ ಸೇನಾನಿಯ ಬದುಕು, ಯುವ ಪೀಳಿಗೆಗೆ ಆದರ್ಶ ಮತ್ತು ಸದೈವ ಪ್ರೇರಣಾದಾಯಿ ಎಂದು, ಅವರು ಹೇಳಿದರು. ಜನರಲ್ ತಿಮ್ಮಯ್ಯ ಅವರ ನಿವಾಸ ಸನ್ನಿಸೈಡ್‌ಗೂ ಭೇಟಿ ನೀಡಿದ್ದ ಅವರು, ವೀರ ಸೇನಾನಿ ಜನರಲ್ ತಿಮ್ಮಯ್ಯ ಅವರ, ಸೇನಾ ಜೀವನಕ್ಕೆ ಸಂಬಂಧಿಸಿದ, ಸಮಗ್ರ ಮಾಹಿತಿ ಪಡೆದರು.

<><><>

**2024–25ನೇ ಸಾಲಿನ ಎಸ್.ಎಸ್.ಎಲ್.ಸಿ.** ಪರೀಕ್ಷೆ 1, ಮಾರ್ಚ್ 21 ರಂದು ಆರಂಭವಾಗಿ, ಏಪ್ರಿಲ್ 4 ರಂದು ಮುಕ್ತಾಯವಾಗಲಿದೆ. ದ್ವಿತೀಯ ಪಿ.ಯು.ಸಿ. ಪರೀಕ್ಷೆ 1, ಮಾರ್ಚ್ 1 ರಂದು ಆರಂಭವಾಗಿ, ಮಾರ್ಚ್ 20 ರಂದು ಮುಕ್ತಾಯವಾಗಲಿದೆ. ಹೆಚ್ಚಿನ ವಿವರಗಳಿಗಾಗಿ, ಕರ್ನಾಟಕ ಶಾಲಾ ಮತ್ತು ಮೌಲ್ಯ ನಿರ್ಣಯ ಮಂಡಳಿಯ ವೆಬ್‌ಸೈಟ್ ಪರಿಶೀಲಿಸಲು ಪ್ರಕಟಣೆ ಕೋರಿದೆ.

<><><>

**ವೈಕುಂಠ ಏಕಾದಶಿ ಅಂಗವಾಗಿ,** ಗದಗ್‌ನ ಶ್ರೀ ವೀರನಾರಾಯಣ ದೇವಸ್ಥಾನ ಸೇರಿದಂತೆ, ನಾಡಿನಾದ್ಯಂತ ದೇವಾಲಯಗಳಲ್ಲಿ ವಿಶೇಷ ಪೂಜಾ ಕೈಂಕರ್ಯಗಳು ನಡೆದವು. ವಿವಿಧ ಅಲಂಕಾರಗಳು ಗಮನ ಸೆಳೆದವು.

<><><>

**‘ಜೈ ಜವಾನ್, ಜೈ ಕಿಸಾನ್’ ಎಂದು** ಪ್ರತಿಪಾದಿಸಿದ, ಭಾರತದ 2ನೇ ಪ್ರಧಾನಮಂತ್ರಿ, ಲಾಲ್ ಬಹದ್ದೂರ್ ಶಾಸ್ತ್ರಿ ಅವರ, ಪುಣ್ಯತಿಥಿಯಾದ ಇಂದು, ಅವರ ಸ್ಮೃತಿಗೆ ಗೌರವ ಅರ್ಪಿಸಲಾಗುತ್ತಿದೆ.

<><><>

**ಮಕರ ಸಂಕ್ರಾಂತಿ ಹಿನ್ನೆಲೆ,** ಹರಿಹರದಲ್ಲಿ ತುಂಗಭದ್ರಾ ನದಿಯ ಎರಡೂ ದಡಗಳಲ್ಲಿ, ಸ್ವಚ್ಛತಾ ಕಾರ್ಯ ಆಯೋಜಿಸಲಾಗಿದೆ ಎಂದು, ‘ನನ್ನ ಊರು, ನನ್ನ ಹೊಣೆ ಸಂಸ್ಥೆ’ಯ, ರವಿಕುಮಾರ, ದಾವಣಗೆರೆಯಲ್ಲಿ ತಿಳಿಸಿದ್ದಾರೆ.

<><><>

**ಉಪ ಲೋಕಾಯುಕ್ತ ನ್ಯಾಯಮೂರ್ತಿ** ಬಿ.ವೀರಪ್ಪ, ಇದೇ 16 ರಿಂದ 18ರ ವರೆಗೆ ಬಳ್ಳಾರಿ ಜಿಲ್ಲೆಗೆ ಭೇಟಿ ನೀಡಿ, ಸಾರ್ವಜನಿಕರ ಅಹವಾಲು ಆಲಿಸಲಿದ್ದಾರೆ.

<><><>

**ಬೆಂಗಳೂರು ಗ್ರಾಮಾಂತರ ಜಿಲ್ಲೆ,** ದೇವನಹಳ್ಳಿಯ ಕ್ರೀಡಾಂಗಣದಲ್ಲಿ ಇಂದು, ಸಿರಿಧಾನ್ಯಗಳ ಹಬ್ಬ ಆಯೋಜಿಸಲಾಗಿದೆ.

<><><>

**ಮಂಗಳೂರಿನಲ್ಲಿ ಅಕ್ರಮವಾಗಿ** ನೆಲೆಸಿದ್ದ, ಬಾಂಗ್ಲಾ ದೇಶದ ಪ್ರಜೆಯೊಬ್ಬನನ್ನು, ಆಂತರಿಕ ಭದ್ರತಾ ವಿಭಾಗದ ಪೊಲೀಸರು ಬಂಧಿಸಿದ್ದಾರೆ.

<><><>

**‘ಗ್ರಾಮ ಒನ್’ ಸೇವಾ ಕೇಂದ್ರಗಳಲ್ಲಿ,** 80 ಇಲಾಖೆಗಳ 874 ಸೇವೆಗಳನ್ನು ಪಡೆಯಲು ಅವಕಾಶವಿದೆ ಎಂದು, ಹಾವೇರಿ ಜಿಲ್ಲಾಧಿಕಾರಿ ವಿಜಯಮಹಾಂತೇಶ ದಾನಮ್ಮನವರ ತಿಳಿಸಿದ್ದಾರೆ.

<><><>

- **ಉಪ ರಾಷ್ಟ್ರಪತಿ ಜಗದೀಪ ಧನಕರ** ಇಂದು ಬೆಂಗಳೂರಿಗೆ ಆಗಮನ; ಹಲವು ಕಾರ್ಯಕ್ರಮಗಳಲ್ಲಿ ಭಾಗಿ.

- **ಪ್ರಧಾನಮಂತ್ರಿ ಸುರಕ್ಷಿತ ಮಾತೃತ್ವ** ಅಭಿಯಾನ; ಬಳ್ಳಾರಿಯ ಆರೋಗ್ಯ ಕೇಂದ್ರಗಳಲ್ಲಿ, ಗರ್ಭಿಣಿಯರಿಗೆ ಪೌಷ್ಟಿಕ ಭೋಜನ ವ್ಯವಸ್ಥೆ.

- **ಚಿಕ್ಕಮಗಳೂರಿನಲ್ಲಿ, ಕಾಳು ಮೆಣಸು ಸೇರಿ,** ಎಂಟು ಬೆಳೆಗಳ ಸಂಸ್ಕರಣಾ ಘಟಕ ಸ್ಥಾಪನೆಗೆ, ಕೇಂದ್ರಕ್ಕೆ ಪ್ರಸ್ತಾವ.

- **ಧಾರವಾಡ ಜಿಲ್ಲೆ, ತೇಗೂರು ಗ್ರಾಮದ** ‘ಕೃ ್ಣ ವ್ಯಾಲಿ’ ಎಮ್ಮೆ ತಳಿ ಸಂವರ್ಧನಾ ಕೇಂದ್ರ, ರಾಜ್ಯಕ್ಕೆ ಮಾದರಿ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>